**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,ಯವರ ನ್ಯಾಯಾಲಯ**
**ಟಿ.ನರಸೀಪುರ**

**ಸಿಸಿ ನಂಃ 462/2024**

**ಸಿಡಬ್ಲ್ಯೂ- 1 ಪಿಡಬ್ಲ್ಯೂ- 1**

**ಸಾಕ್ಷಿಗೆ ದಿನಾಂಕಃ 20.05.2026 ರಂದು ಪ್ರಮಾಣ ಮಾಡಿಸಲಾಯಿತು.**
**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ದಿ.04.11.2022 ರಂದು ಸಂಜೆ 6.00 ಗಂಟೆಯ ಸಮಯದಲ್ಲಿ ಚಾಸಾ.2 ರವರು ಕರೆ ಮಾಡಿ ತೊಟ್ಟವಾಡಿ ಗ್ರಾಮದ ಗೇಟ್ ಬಳಿ ಅಕ್ಕಿಯನ್ನು ಜಪ್ತಿ ಮಾಡಿದ್ದು, ಅದು ಪಡಿತರ ಅಕ್ಕಿಯ ಬಗ್ಗೆ ಪರಿಶೀಲಿಸುವಂತೆ ಮನವಿ ಮಾಡಿರುತ್ತಾರೆ. ನಾನು ಘಟನಾ ಸ್ಥಳಕ್ಕೆ ಸಂಜೆ 6.30 ರ ಸಮಯಕ್ಕೆ ಹೋಗಿದ್ದು, ಅಲ್ಲಿ ಒಂದು ಟೆಂಪೋ ನಿಂತಿದ್ದು, ಅದರ ಸಂಖ್ಯೆ ಕೆಎ-19 ಬಿ 0837 ನಂಬರಿನ ಟಾಟಾ 407 ಟೆಂಪೋ ಆಗಿದ್ದು, ಸದರಿ ವಾಹನದಲ್ಲಿ ಅಕ್ಕಿ ತುಂಬಿರುವುದು ಕಂಡುಬಂದಿರುತ್ತದೆ. ಸದರಿ ಅಕ್ಕಿಯನ್ನು ಪರಿಶೀಲನೆ ಮಾಡಿದಾಗ ಅದು ಪಡಿತರ ಅಕ್ಕಿ ಎಂದು ಮೇಲ್ನೋಟಕ್ಕೆ ಕಂಡುಬಂದಿದ್ದು, 96 ಚೀಲ ಇರುವುದು ಕಂಡುಬಂದಿರುತ್ತದೆ. ನಂತರ ಅಕ್ಕಿಯ ಪ್ರಮಾಣ 40.32 ಕ್ವಿಂಟಾಲ್ ಇರುತ್ತದೆ. ಸ್ಥಳದಲ್ಲಿ ಹಾಜರಿದ್ದ ಚಾಸಾ.5 ಮತ್ತು 6 ರವರನ್ನು ಪಂಚರನ್ನಾಗಿ ಕೋರಿದ್ದು, ಅವರು ಒಪ್ಪಿದ ಮೇರೆಗೆ ಅವರಿಗೆ ನೋಟಿಸನ್ನು ಜಾರಿ ಮಾಡಿದ್ದು, ನಂತರ ಅವರ ಸಮಕ್ಷಮ ಪಂಚನಾಮೆಯನ್ನು ಸಂಜೆ 7.00 ರಿಂದ 8.00 ಗಂಟೆಯವರೆಗೆ ಜರುಗಿಸಿದ್ದು, ಅಕ್ಕಿಯನ್ನು ಅಮಾನತ್ತುಪಡಿಸಿಕೊಂಡಿರುತ್ತೇವೆ. ಸ್ಥಳದಲ್ಲಿ ವಾಹನ ಚಾಲಕರನ್ನು ಬಿಲ್ಲನ್ನು ಕೇಳಿದ್ದು ಅವರು ಇಲ್ಲ ಎಂದು ಹೇಳಿರುತ್ತಾರೆ.

ವಾಹನದ ಚಾಲಕ ಯಳಂದೂರು ಬಳೆಪೇಟೆಯಿಂದ ಮಂಡ್ಯ ಜಿಲ್ಲೆ ಕಿರುಗಾವಲಿಗೆ ಸಾಗಾಣಿಕೆ ಮಾಡುತ್ತಿರುವುದಾಗಿ ಹೇಳಿರುತ್ತಾರೆ. ಯಾವುದೇ ಬಿಲ್ಲು, ವಗೈರೆ ಇಲ್ಲದ ಕಾರಣ ಅಕ್ರಮವಾಗಿ ಪಡಿತರ ಅಕ್ಕಿಯನ್ನು ಸಾಗಾಣಿಕೆ ಮಾಡುತ್ತಿರುವುದು ಕಂಡುಬಂದಿದ್ದ ಕಾರಣ ಆರೋಪಿ ಮತ್ತು ವಾಹನ ಮತ್ತು ಅಕ್ಕಿಯನ್ನು ವಶಕ್ಕೆ ಪಡೆದಿರುತ್ತೇವೆ. ನಂತರ ಆರೋಪಿಗಳ ವಿರುದ್ಧ ದೂರನ್ನು ದಾಖಲು ಮಾಡಿರುತ್ತೇನೆ. ಘಟನಾ ಸ್ಥಳದಲ್ಲಿ ಫೋಟೋ ತೆಗೆದಿರುತ್ತಾರೆ. 2 ನೇ ಆರೋಪಿ ಹಾಜರಿದ್ದು, ಅವರನ್ನು ನೋಡಿ ಗುರುತಿಸಿರುತ್ತಾರೆ. 1 ನೇ ಆರೋಪಿ ಗೈರು ಹಾಜರಿದ್ದು, ಅವರನ್ನು ನೊಡಿದರೆ ಗುರುತಿಸುತ್ತೇನೆ. ಅಮಾನತ್ತುಪಡಿಸಿಕೊಂಡ ಅಕ್ಕಿಯನ್ನು ಹರಾಜಿನ ಮೂಲಕ ಮಾರಾಟ ಮಾಡಿ ಹಣವನ್ನು ಸರ್ಕಾರಕ್ಕೆ ಜಮಾ ಮಾಡಿರುತ್ತೇನೆ.

ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮಹಜರ್ ನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿ.07.11.2022ರ ದೃಢೀಕರಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.3 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು 5 ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ನಿ.ಪಿ.4 ಎಂದು ಗುರುತಿಸಲಾಯಿತು. ಒಂದು ಸಿ.ಡಿ.ಯನ್ನು ನಿ.ಪಿ.5 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಶ್ರೀ. ಎಂ.ಎಸ್.ಆರ್. ವಕೀಲರಿಂದ:</u>**

ನನಗೆ ಘಟನೆಯ ದಿನ ಕರೆ ಬಂದಾಗ ಸುಮಾರು 5.30 ಆಗಿತ್ತು. ತಲಕಾಡು ಪೋಲಿಸ್ ಠಾಣೆಗೆ ಹೋದಾಗ ರಾತ್ರಿ 8.40 ಆಗಿತ್ತು. ಚಾಸಾ.5 ಮತ್ತು 6ರವರನ್ನು ನಾನೇ ಸ್ಥಳಕ್ಕೆ ಕರೆಸಿರುತ್ತೇನೆ. ಸರ್ಕಾರದಿಂದ ಅಕ್ಕಿಯನ್ನು ಗೋಣಿ ಚೀಲದಲ್ಲಿ ವಿತರಣೆ ಮಾಡುತ್ತಾರೆ. ಗೋಣಿ ಚೀಲಕ್ಕೆ ಮಿಷನ್ ನಿಂದ ಹೊಲೆದಿರುತ್ತಾರೆ. ಅಮಾನತ್ತುಪಡಿಸಿಕೊಂಡ ಅಕ್ಕಿಯ ಚೀಲ ಬಿಳಿ ಚೀಲದಲ್ಲಿ ಕಟ್ಟಿದ್ದರು. ಚೀಲದ ಮೇಲೆ ಬರವಣಿಗೆ ಇರಲಿಲ್ಲ. ನಿ.ಪಿ.4ರ ಫೋಟೋದಲ್ಲಿ ಬೇರೆ ಬೇರೆ ಬಣ್ಣದ ಚೀಲಗಳು ಇರುತ್ತವೆ ಎಂದರೆ ಸರಿ. ದೊರೆತ ಅಕ್ಕಿಯಲ್ಲಿ 2ಕೆ.ಜಿ. ಅಕ್ಕಿಯನ್ನು ಮಾತ್ರ ಪ್ರತ್ಯೇಕ ಮಾಡಿರುತ್ತೇವೆ. 96 ಚೀಲಗಳನ್ನು ತೆರೆದಿರುವುದಿಲ್ಲ. ಆರೋಪಿಗೂ ಮತ್ತು ಪಡಿತರ ಅಕ್ಕಿಗೂ ಯಾವುದೇ ಸಂಬಂಧ ಇಲ್ಲದೆ ಇದ್ದರೂ ಅವರುಗಳ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮಹಜರ್ ನ್ನು ಪೋಲಿಸ್ ಠಾಣೆಯಲ್ಲಿ ಜರುಗಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ. ಟಿ.ನರಸೀಪುರ**